ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 30.09.14

ಈ ವಾರದ ಮುನ್ಸೂಚನೆ (01-10-14 to 05-10-14 ವರೆಗೆ)

ನಿಯತಾಂಕಗಳು	01.10.14	02.10.14	03.10.14	04.10.14	05.10.14
ಮಳೆ (ಮಿ ಮಿ)	2	4	3	3	4
ಗರಿಷ್ಠ ಉಷ್ಣಾಂಶ(ಡಿ.ಸೆ.)	30	30	31	31	31
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	21	21	20
ಮೋಡ (ಪ್ರಮಾಣ)	2	2	1	1	2
ಅರ್ದ್ರತೆ ೭.೨೦ ಬೆ (ಶೇ)	83	85	79	83	84
ಅರ್ದ್ರತೆ ೨.೨೦ ಮ (ಶೇ)	56	61	54	54	48
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	5	6	6	6
ಗಾಳಿಯ ದಿಕ್ಕು (ಡಿಗ್ರಿ)	150	145	185	120	85

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿರಲಿದ್ದು, ಸಂಜೆ ಅಥವಾ ರಾತ್ರಿ ಹಗುರವಾದ/ತುಂತುರು ಮಳೆಯ ಸಂಭವ ಇದೆ. ದಿನದ ಗರಿಷ್ಠ ಉಷ್ಣಾಂಶವು 30.0-31.0^{o}C ಮತ್ತು ಕನಿಷ್ಠ 20-20°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 79-85% ಇದ್ದು, ಮಧ್ಯಾಹ್ನ 48-61 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 5-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಮುಂದಿನ ಐದು ದಿನಗಳಲ್ಲಿ ಮಳೆಯ ನಿರೀಕ್ಷೆ ಕಡಿಮೆ ಇರುವುದರಿಂದ ಔಷಧಿ ಕೃಷಿ ಚಟುವಟಿಕೆಗಳಾದ ಕಳೆ ನಿಯಂತ್ರಣ, ಔಷಧಿ ಸಿಂಪಡಣೆಯನ್ನು ಮಾಡಬಹುದು.
- ✓ ಪರ್ಯಾಯ ಬೆಳೆಗಳು: ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಸೂರ್ಯಕಾಂತಿ, ಮೇವಿನ ಜೋಳವನ್ನು ಬಿತ್ತನೆ ಮಾಡಬಹುದು
- ✓ ರಾಗಿ: ಕಳೆ ತೆಗೆಯುವುದು. ಮೇಲು ಗೊಬ್ಬರ ಹಾಕಬೇಕು
- ✓ ತೊಗರಿ: ಹೂ ಬಿಡುವ ಹಂತದಲ್ಲಿದ್ದು, ಹೊಲದಲ್ಲಿ ಅಲ್ಲಲ್ಲಿ ಮರದ ಕೊಂಬೆಗಳನ್ನು ನೆಟ್ಟು ಪಕ್ಷಿಗಳು ಕೂರಲು ಅನುಕೂಲವಾಗುವಂತೆ ಮಾಡುವುದು. ಹೀಗೆ ಮಾಡುವುದರಿಂದ ಹೂಗಳು ಮತ್ತು ಕಾಯಿಯ ಮೇಲೆ ಬರುವ ಹುಳುಗಳನ್ನು ಪಕ್ಷಿಗಳು ತಿಂದು ಬೆಳೆಗೆ ಆಗುವ ಹಾನಿಗಯನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಬಹುದು.

ಸಸ್ಯ ಸಂರಕ್ಷಣೆ:

- ✓ ಥ್ರಿಪ್ಸ್/ಹೇನು/ಎಫಿಡ್ಸ್/ವಜ್ರ ಬೆನ್ನಿನ ಹುಳು (ಎಲೆ ಕೋಸು, ಹೂ ಕೋಸಿನಲ್ಲಿ) ಹಾಗೂ ಇನ್ನಿತರೆ ರಸ ಹೀರುವ ಕೀಟಗಳ ಬಾಧೆಯು ಹೆಚ್ಚಾಗಿದ್ದರೆ ಬೇವಿನ ಎಣ್ಣೆಯನ್ನು ಅಥವಾ ಕಷಾಯ/ಕಾನ್ಫಿಡಾರ್‌ನ್ನು ಸಿಂಪಡಿಸಬೇಕು..
- ✓ ಎಲೆ ಕೋಸು ಹಾಗೂ ಹೂ ಕೋಸು ಬೆಳೆಗಳಲ್ಲಿ ಅಂಟು ದ್ರಾವಣ ಲೇಪಿಸಿದ ಹಳದಿ ಅಥವಾ ನೀಲಿ ಬಣ್ಣದ ಪೇಪರ್ ಅಥವಾ ಕಾರ್ಡ್ ಅನ್ನು ಹೊಲದಲ್ಲಿ ಅಲ್ಲಲ್ಲಿ ಇಡುವುದರಿಂದ ಕೀಟಗಳನ್ನು (ವಿಶೇಷವಾಗಿ ರಸಹೀರುವ ಕೀಟಗಳು) ಆಕರ್ಷಿಸಬಹುದು.

ಸಹ ಸಂಶೋಧಕರು:
ಡಿ.ಶ್ರೀಧರ್

ನೋಡಲ್ ಅಧಿಕಾರಿ:
ಎನ್.ಎ.ಜನಾರ್ಧನಗೌಡ
ಬೆಂಗಳೂರು